# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಂಗಳೂರು ಮತ್ತು ಇತರೆ 11 ನಗರ ಪಾಲಿಕೆಗಳಲ್ಲಿ ನಗರವ್ಯಾಪಿ ಉಚಿತ ಸಾರ್ವಜನಿಕ ವೈ-ಫೈ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 17ನೇ ಆಗಸ್ಟ್ 2017ರಂದು ನಡೆದ ಸಭೆಯ ನಡವಳಿಗಳು.

***

ಪ್ರಸ್ತಾವನೆ:-

ಮೊಬೈಲ್ ದೂರವಾಣಿಗಳು ಅಗಾಧ ಸಂಖ್ಯೆಯಲ್ಲಿ ಹೆಚ್ಚುತ್ತಿದ್ದು, ಇದು ಸಾರ್ವಜನಿಕ ಮಾಹಿತಿ ಹಾಗೂ ಸರ್ಕಾರದ ಸೇವೆಗಳು "ಯಾವುದೇ ಸಮಯದಲ್ಲಿ, ಎಲ್ಲಾದರೂ" ಲಭ್ಯವಾಗುವ ಸಾಮರ್ಥ್ಯ ಹೊಂದಿರುವುದರಿಂದ ಮೊಬೈಲ್ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯತೆ ಉದ್ಭವಿಸಿದೆ. ಡಿಜಿಟಲ್ ಜಗತ್ತಿಗೆ ಹೊಕ್ಕುವ ಅವಕಾಶವು ಕ್ರಮೇಣವಾಗಿ ಅಗತ್ಯತೆಯಾಗಿ ಪರಿಣಮಿಸುತ್ತಿದ್ದು, ಇದಕ್ಕೆ ಕೊರತೆಯುಂಟಾದಲ್ಲಿ, ನಾಗರೀಕರು ರಾಷ್ಟ್ರದ ಏಳಿಗೆಯಲ್ಲಿ ಭಾಜನರಾಗುವ ಅವಕಾಶದಿಂದ ವಂಚಿತರಾಗಿ ಡಿಜಿಟಲ್ ಕಂದರವೇ ಉಂಟಾಗಬಹುದಾಗಿದೆ. ನಗರಗಳಲ್ಲಿ ದೂರಸಂಪರ್ಕ ಸೇವಾದಾರರು (TSP) /ಅಂತರ್ಜಾಲ ಸೇವಾದಾರರು (ISP) ಗಳಿಂದ ತಂತು ಸಂಪರ್ಕ ಜಾಲದ ಸೌಲಭ್ಯ ಒದಗಿಸಲಾಗಿದ್ದಾಗ್ಯೂ, ಕೆಲವು ಮನೆಗಳಿಗೆ ದರಗಳು ಕೈಗೆಟುಕದೇ ಹೋಗಿ ಮುಡಿಪಾದ ಸಂಪರ್ಕ ಹೊಂದದೇ, ಈ ಜಾಲದ ಸೌಲಭ್ಯ ಪಡೆಯಲು ಸಾಧ್ಯವಾಗದೇ ಉಳಿಯುವ ಪರಿಸ್ಥಿತಿ ಇರಬಹುದು. ಬಹುಪಾಲು ಸರ್ಕಾರಿ ಸೇವೆಗಳಾಗಿರುವ ವಿವಿಧ ವೆಬ್-ಆಧಾರಿತ ಸೇವೆಗಳನ್ನು ಪಡೆಯಲು ವೈ-ಫೈ ಅನುವಾಗಿರುವ ಮೊಬೈಲ್ ಉಪಕರಣಗಳೇ ಪ್ರಮುಖವಾಗಿ ಪರಿಣಮಿಸಬಹುದು. ನಗರಗಳಲ್ಲಿ ಹೆಚ್ಚು ಅಡ್ಡಾಟವಿರುವ ಬಸ್ ನಿಲ್ದಾಣ, ಮಾರುಕಟ್ಟೆ, ಸರ್ಕಾರಿ ಕಟ್ಟಡಗಳು ಮತ್ತಿತರ ಪ್ರದೇಶಗಳಲ್ಲಿ ಅಗಾಧವಾಗಿ ಹರಿದಾಡುವ ಜನಸಂಖ್ಯೆ, ಪ್ರವಾಸಿಗಳು ಇತ್ಯಾದಿಗಳನ್ನು ಸಹ ಹೊಂದಿವೆ. ಚಲನೆಯಲ್ಲಿರುವ ಜನತೆಗೆ ಸೇವೆ ಒದಗಿಸಲು ಅತ್ಯುತ್ತಮ ಮಾರ್ಗವೆಂದರೆ "ಸಾರ್ವಜನಿಕ ವೈ-ಫೈ ಹಾಟ್‌ಸ್ಪಾಟ್"ಗಳಾಗಿವೆ.

2. ಸಾರ್ವಜನಿಕ ಮೂಲಸೌಕರ್ಯದ ಬಳಕೆಗೆ ಅನುವಾಗುಲು ಪೂರಕ ಆದೇಶವನ್ನು ಹೊರಡಿಸಲು ಸರ್ಕಾರವು ಉದ್ದೇಶಿಸಿದೆ. TSP/ISP ಸೇವಾದಾರರುಗಳು ಬಳಕೆದಾರರಿಗೆ ಕಾಲಾಧಾರಿತ ಮತ್ತು ಗಾತ್ರಾಧಾರಿತ ಪ್ಯಾಕೇಜ್‌ಗಳ ಆಧಾರದ ಮೇಲೆ ವೈ-ಫೈ ಒದಗಿಸಿದ್ದನ್ನು ಬಳಕೆದಾರರು ಖರೀದಿಸಿ ಉಪಯೋಗಿಸುವರು. ಈ ಸ್ಥಳೀಯ ವೈ-ಫೈ ಹಾಟ್‌ಸ್ಪಾಟ್‌ಗಳು TSP/ISP ಸೇವಾದಾರರುಗಳಿಂದ ಈಗಾಗಲೇ ದಟ್ಟಣೆಗೊಂಡಿರುವ ಜಾಲಸಂಪರ್ಕಗಳಿಂದ ಸಂಚಾರದ ಹೊರೆಯನ್ನು ಕಡಿಮೆ ಮಾಡುವ ತಂತ್ರವಾಗಿಯೂ ಕೂಡ ಸಹಾಯಕವಾಗುತ್ತವೆ. ಆದ್ದರಿಂದ, TSP/ISP ಸೇವಾದಾರರುಗಳು ಈ ಅವಕಾಶದಿಂದ ವಹಿವಾಟು ನಡೆಸುವ ಹಾಗೂ ಸಂಪರ್ಕ ಜಾಲಕ್ಕೆ ಇನ್ನೂ ಹೆಚ್ಚಿನ ಸಾರ್ವಜನಿಕ ವೈ-ಫೈ ಹಾಟ್‌ಸ್ಪಾಟ್‌ಗಳ ಸೇರ್ಪಡೆಗೆ ಹೂಡಿಕೆ ಮಾಡುವ ನಿರೀಕ್ಷೆಯಿದೆ.

3. ಮೇಲೆ ಓದಲಾದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ದಿನಾಂಕ 17ನೇ ಆಗಸ್ಟ್ 2017ರಂದು ನಡೆದ "ಬೆಂಗಳೂರು ಮತ್ತು ಇತರೆ ನಗರ ಪಾಲಿಕೆಗಳಲ್ಲಿ ಸಾರ್ವಜನಿಕ ವೈ-ಫೈ" ಸೌಲಭ್ಯ ಕುರಿತ ಸಭೆಯಲ್ಲಿ, ಭಾರತದಲ್ಲಿ ಹಾಗೂ ವಿಶ್ವದಾದ್ಯಂತ ವಿವಿಧ ನಗರಗಳಲ್ಲಿ ಪ್ರಯತ್ನಿಸಿರುವ ವಿವಿಧ ಮಾದರಿಗಳ ತುಲನಾತ್ಮಕ ಅಧ್ಯಯನದಿಂದ ಅರಿತುಕೊಂಡಂತೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಸಮನ್ವಯ (ನೋಡಲ್) ಇಲಾಖೆಯಾಗಿರುವಂತೆ ನಿರ್ಧರಿಸಲಾಯಿತು. ಸಭೆಯಲ್ಲಿ ಕೈಗೊಳ್ಳಲಾದ ನಿರ್ಧಾರಗಳನ್ವಯ ಸೇವಾದಾರರುಗಳ ತೊಂದರೆಗಳನ್ನು ನಿವಾರಿಸಿ "ಕರ್ನಾಟಕ ರಾಜ್ಯದ ಬೆಂಗಳೂರು ಮತ್ತಿತರ ನಗರ ಪಾಲಿಕೆಗಳಲ್ಲಿ ಸಾರ್ವಜನಿಕ ವೈ-ಫೈ ಹಾಟ್‌ಸ್ಪಾಟ್‌ಗಳ" ಸ್ಥಾಪನೆಗೆ ಅನುವಾಗುವ ಆದೇಶವನ್ನು ಇಲಾಖೆಯು ಹೊರಡಿತಕ್ಕದ್ದು.

4. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:-

**ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 74 ಎಡಿಎಂ 2017, ಬೆಂಗಳೂರು, ದಿನಾಂಕ:18.09.2017**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಬೆಂಗಳೂರು ನಗರ ಮತ್ತಿತರ 11 ನಗರ ಪಾಲಿಕೆಗಳಲ್ಲಿ ಸಾರ್ವಜನಿಕ ವೈ-ಫೈ ಹಾಟ್‌ಸ್ಪಾಟ್‌ಗಳ ಸ್ಥಾಪನೆಗಾಗಿ TSP/ISP ಸೇವಾದಾರರುಗಳಿಗೆ ಅನುವಾಗುವಂತೆ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಆದೇಶಿಸಿದೆ:-

ಅ) ಸೇವಾದಾರರುಗಳು ನೆಲದಡಿಯಲ್ಲಿ (ROW- Right of Way & Restoration) ಫೈಬರ್ ಸ್ಥಾಪಿಸಲು ಸಂಬಂಧಪಟ್ಟ ಮುನಿಸಿಪಲ್ ಕಾರ್ಪೋರೇಷನ್‌ಗಳು ನಿಗದಿಪಡಿಸಿದ ಶುಲ್ಕಗಳನ್ನು ಭರಿಸಲು ಬದ್ಧರಾಗಿರತಕ್ಕದ್ದು.

ಆ) ಹೊರಹವೆಯಲ್ಲಿ ಕೇಬಲ್ (Aerial Cabling) ಸ್ಥಾಪಿಸುವುದು ಯುಕ್ತವಲ್ಲ, ಆದರೆ ನೆಲದಡಿಯ ಕೇಬಲ್ ಸ್ಥಾಪನೆಗೆ ಸಾಧ್ಯವಾಗದಿರುವ ತೀವ್ರ ಅನಿವಾರ್ಯ ಸಂದರ್ಭಗಳಲ್ಲಿ ಅವಕಾಶ ಕಲ್ಪಿಸತಕ್ಕದ್ದು, ಜೊತೆಗೆ, ಪಾದಚಾರಿಗಳಿಗೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಸುರಕ್ಷತೆ ಮತ್ತು ಸೌಂದರ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಾರ್ಯವನ್ನು ಜಾಗರೂಕತೆಯಿಂದ ನಿರ್ವಹಿಸಲಾಗುವುದು. ಅದಾಗ್ಯೂ, ಸೇವಾದಾರರು ಆ ಕೂಡಲೆ, 180 ದಿನಗಳಿಗೆ ಮೀರದಂತೆ ಹೊರಹವೆಯ ಕೇಬಲ್‌ಗಳನ್ನು ನೆಲದಡಿಯಲ್ಲಿ ಸ್ಥಾಪಿಸತಕ್ಕದ್ದು. ಕೇಬಲ್ ನಳಿಕೆ (Cable Duct) ಲಭ್ಯವಿರುವ ಪ್ರದೇಶಗಳಲ್ಲಿ, ಸೇವಾದಾರರುಗಳು ಲಭ್ಯವಾದ ಸೌಕರ್ಯವನ್ನು ಬಳಸತಕ್ಕದ್ದು.

ಇ) ಸೇವಾದಾರರಿಂದ ಸಂಬಂಧಪಟ್ಟ ಬೆಸ್ಕಾಂ (BESSCOM)ಗೆ ಪ್ರತಿ ಕಂಬಕ್ಕೆ ಒಂದು ತಿಂಗಳಿಗೆ ರೂ.500.00 ಶುಲ್ಕವನ್ನು ಬಾಡಿಗೆಯಾಗಿ ಪಾವತಿಸತಕ್ಕದ್ದು. ಈ ಪಾವತಿಯಲ್ಲಿ, ಹೊರಹವೆಯ ಫೈಬರ್ ಮೇಲಿನ ಐಔಫ಼ ಹಾಗೂ ಇತರ ತಂತುರಹಿತ ಬೆಂಬಲ ಉಪಕರಣ (Backhaul Equipment)ಗಳಿಗಾಗಿ ಕಂಬವನ್ನು ಬಳಸಲು ನೀಡುವ ಅನುಮತಿಯೂ ಒಳಗೊಂಡಿದೆ. ಯಾವುದೇ ಉಪಕರಣವು ಸ್ಥಾಪನೆಯಾಗಿರದಿದ್ದಲ್ಲಿ, ಸೇವಾದಾರರಿಗೆ ತಿಂಗಳಿಗೆ ರೂ.50.00 ರಂತೆ ಶುಲ್ಕ ವಿಧಿಸತಕ್ಕದ್ದು.

ಈ) ವೈ-ಫೈ ಉಪಕರಣಗಳನ್ನು ವಿವಿಧ ತಾಣಗಳಲ್ಲಿ ಸ್ಥಾಪಿಸಿ ನಿರ್ವಹಿಸುವ ಸಲುವಾಗಿ ನ್ಯಾಯಾಲಯಗಳು, ಶಾಲೆಗಳು, ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಕಛೇರಿಗಳೇ ಮುಂತಾದ ಸರ್ಕಾರಿ ಸ್ವಾಮ್ಯದ ಕಟ್ಟಡಗಳಲ್ಲಿ ವೈ-ಫೈ ಹಾಟ್‌ಸ್ಪಾಟ್‌ಗಳ ಸ್ಥಾಪನೆಗೆ ಸೇವಾದಾರರು ಜಾಗವನ್ನು ಬಳಸಲು ಅನುಮತಿ ನೀಡಲಾಗುವುದು. ಇಂತಹ ವೈ-ಫೈ ಪಡೆಯುವ ಸ್ಥಾನಗಳಿಗೆ ಶಕ್ತಿ ಪೂರೈಸಲು ಸೂರುಮೇಲಿನ ಸೌರಶಕ್ತಿಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು, ಆದಾಗ್ಯೂ, ಸೇವಾದಾರರು ನಿಗದಿತ ಮಾಸಿಕ ಶುಲ್ಕವನ್ನು ಪಾವತಿಸಿ ಸಂಬಂಧಪಟ್ಟ ಸರ್ಕಾರಿ ಕಟ್ಟಡಗಳ ವಿದ್ಯುತ್ ಸಂಪರ್ಕದಿಂದ ವಿದ್ಯುಚ್ಛಕ್ತಿ ಪಡೆಯಲು ಅನುಮತಿ ನೀಡಲಾಗುವುದು.

ಉ) ಪ್ರತಿಯೊಂದು ಹಾಟ್‌ಸ್ಪಾಟ್ ಅಳವಡಿಸಿ ಪಡೆಯುವ ತಣಕ್ಕೂ ಸೇವಾದಾರರು ತಿಂಗಳಿಗೆ ರೂ.500.00 ಭರಿಸತಕ್ಕದ್ದು, ಇದರಲ್ಲಿ ಬಾಡಿಗೆ ಮತ್ತು ವಿದ್ಯುಚ್ಛಕ್ತಿ ಶುಲ್ಕಗಳೂ ಒಳಗೊಂಡಿರತಕ್ಕದ್ದು.

ಊ)ಬ್ರ್ಯಾಂಡಿಂಗ್ (Branding): Landing page & SSIDಗಳ ಬ್ರ್ಯಾಂಡಿಂಗ್ ಕಾರ್ಯವು ಕರ್ನಾಟಕ ಸರ್ಕಾರದ, ಸ್ಥಳೀಯ ಸಂಸ್ಥೆಯ ಹಾಗೂ ಸೇವಾದಾರರ ಸರ್ವಸಮ್ಮತವಾದ ಬ್ರ್ಯಾಂಡ್ ಅಡಿಯಲ್ಲಿರತಕ್ಕದ್ದು.

ಋ)ಸೇವಾದಾರರು ಚಾಲನೆಗೊಳಿಸುವ ವೈ-ಫೈ ಹಾಟ್‌ಸ್ಪಾಟ್ ಲಭ್ಯವಾಗುವ ಪರಿಧಿ (radius) ಯೊಳಗೆ ಹಾಟ್‌ಸ್ಪಾಟ್‌ನ ಜಾಹೀರಾತನ್ನು ಎರಡು ತಾಣಗಳಿಗೆ ನಿರ್ಬಂಧಿಸಬಹುದು. ಜಾಹೀರಾತನ್ನು ಕರ್ನಾಟಕ ಸರ್ಕಾರದ, ಮುನಿಸಿಪಲ್ ಸಂಸ್ಥೆಯ ಹಾಗೂ ಸೇವಾದಾರರ

ಲಾಂಛನಗಳನ್ನು ಬಳಸಿ co-brand ಮಾಡತಕ್ಕದ್ದು. ಇವುಗಳು ಸಂದೇಶ ಫಲಕದ ರೂಪದಲ್ಲಿರಬೇಕೇ ಹೊರತು ಜಾಹೀರಾತಿನ ಬೃಹತ್ ಫಲಕಗಳಾಗಿರಕೂಡದು ಮತ್ತು ಗಾತ್ರಕ್ಕೆ ಮಿತಿಯು ಅನ್ವಯವಾಗುತ್ತದೆ. ನಿಗದಿಪಡಿಸಿರುವ ಮುನಿಸಿಪಲ್ ನಿಯಮಾವಳಿಗಳಿಗೆ ಈ ಜಾಹೀರಾತುಗಳು ಒಳಪಡುತ್ತವೆ.

ಎ) ಉಚಿತ ವೈ-ಫೈ: ರಾಜ್ಯ ಸರ್ಕಾರದ ಪೋರ್ಟಲ್‌ಗೆ ಹೊಕ್ಕಲು ಉಚಿತ ಅವಕಾಶ ಹಾಗೂ ನಾಗರೀಕರಿಗೆ ಪೂರ್ವನಿಗದಿತ ತುರ್ತು ಸೇವೆಗಳಿಗೆ ಅವಕಾಶವನ್ನು ಸೇವಾದಾರರು ಒದಗಿಸತಕ್ಕದ್ದು. ಜೊತೆಗೆ, ಸಾಮಾನ್ಯ ಜನತೆಗೆ ಸಮಯ/ಗಾತ್ರ ಆಧಾರಿತ ಉಚಿತ ಅಂತರ್ಜಾಲ ಪ್ಯಾಕ್ ನೀಡಿ (ದಿನವೊಂದಕ್ಕೆ ಬಳಕೆದಾರರೊಬ್ಬರಿಗೆ ಒಂದು ಬಾರಿಗೆ ಕನಿಷ್ಠ ೩೦ ನಿಮಿಷಗಳಷ್ಟು ಹಾಗೂ ಗರಿಷ್ಠ ೧೦೦ ಎಂ.ಬಿ.ಯಷ್ಟು) ಉಚಿತ ವೈ-ಫೈ ಅವಕಾಶವನ್ನು ಸೇವಾದಾರರು ಒದಗಿಸತಕ್ಕದ್ದು.

ಏ) ಸೇವಾದಾರರ ಸಂಖ್ಯೆ: ಪ್ರತಿಯೊಂದು ತಾಣದಲ್ಲೂ ಬಹುಸಂಖ್ಯೆಯ ಸೇವಾದಾರರಿಗೆ ಅವಕಾಶವಿರತಕ್ಕದ್ದು, ಇದರಿಂದಾಗಿ ಬಳಕೆದಾರರಿಗೆ ಸೇವೆಯಲ್ಲಿ ಮತ್ತು ನಿವೇದನೆಗಳ (offers) ಆಯ್ಕೆ ಇರಬಹುದಾದಂತಾಗುವುದು. ಆದರೆ, ಪ್ರಸ್ತುತ ಮೂರು ಸೇವಾದಾರರಿಗೆ ಮಾತ್ರ ನಿರ್ಬಂಧಗೊಳಿಸಿ ಅವಕಾಶ ಕಲ್ಪಿಸತಕ್ಕದ್ದು.

ಐ) ಪ್ರಸ್ತುತವಿರುವ ಕಂಬ ಮತ್ತು ಮೂಲಸೌಕರ್ಯವನ್ನು ಬಳಸುವಲ್ಲಿ ಆಯ್ಕೆ ಇದ್ದಾಗಿಯೂ ಸಹ, ಅಗತ್ಯವಾಗುವ ಎತ್ತರದ ಕಂಬವು ಲಭ್ಯವಾಗದಿರುವ ಸಂದರ್ಭಗಳಲ್ಲಿ, TSP/ISP ಸೇವಾದಾರರುಗಳು ೧೨/೩೦ ಮೀಟರ್ ಉದ್ದದ ಹೊಸ 'ಸ್ಮಾರ್ಟ್ ಪೋಲ್'ಗಳನ್ನು ಸ್ಥಾಪಿಸಬಹುದಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಇಂತಹ ಕಂಬಗಳಿಗಾಗಿ ROW ಅನುಮತಿಗಳನ್ನು ಆದ್ಯತೆ ಮೇರೆಗೆ ಪರಿಗಣಿಸತಕ್ಕದ್ದು. ಇಂತಹ ಪ್ರತಿಯೊಂದು ಕಂಬಕ್ಕೂ, ಪ್ರತಿ ತಿಂಗಳ ಶುಲ್ಕವಾಗಿ ಒಂದು ಕಂಬಕ್ಕೆ ರೂ.೫೦೦.೦೦ಗಳನ್ನು ವಿಧಿಸತಕ್ಕದ್ದು.

೨. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. FD 4850 ACS/17, ದಿನಾಂಕ:೧೩-೦೯-೨೦೧೭ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ
18/9
(ಸಿದ್ರಾಮಪ್ಪ ಹ ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
4. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
5. ಸರ್ಕಾರದ ಕಾರ್ಯದರ್ಶಿ, ವಾರ್ತಾ ಮತ್ತು ಪ್ರಚಾರ ಇಲಾಖೆ
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ (BESCOM), ಕೆ.ಆರ್.ವೃತ್ತ, ಬೆಂಗಳೂರು-೫೬೦೦೦೧.
8. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾಂತಿನಗರ, ಬೆಂಗಳೂರು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಐಟಿ, ಬಿಟಿ ಮತ್ತು ಎಸ್&ಟಿ ಇಲಾಖೆ ಯವರ ಆಪ್ತ ಕಾರ್ಯದರ್ಶಿ
11. ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ
12. ರಕ್ಷಾ ಕಡತ/ ಬಿಡಿ ಪ್ರತಿಗಳು.